# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೊಂದಾಯಿತ ವಿಳಾಸ : ನಿಗಮ ಕಾರ್ಯಾಲಯ, ನಂ. 29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-570017

ದೂರವಾಣಿ ಕಛೇರಿ : 08226-238025
ವೆಬ್‌ಸೈಟ್: www.cescmysore.org
ಇ ಮೇಲ್ : eeechn@cescmysore.org

ಕಛೇರಿ ವಿಳಾಸ :
ಕಾರ್ಯನಿರ್ವಾಹಕ ಇಂಜಿನಿಯರ್ (ವಿ).
ಕಾರ್ಯ ಮತ್ತು ಪಾಲನಾ ವಿಭಾಗ
ಚಾ.ವಿ.ಸ.ನಿ.ನಿ., ಚಾಮರಾಜನಗರ-571313


ಕ್ರಮ ಸಂಖ್ಯೆ: ಸ.ಕಾ.ನಿ.ಇಂ.(ವಿ)/ಸಲೆ/ಚಾ.ನಗರ/19-20/ 648-19 ದಿನಾಂಕ: 28-06-2019

127

## ಜನಸಂಪರ್ಕ ಸಭೆಯ ನಡಾವಳಿ

ದಿನಾಂಕ: 26-06-2019 ರಂದು ಚಾಮರಾಜನಗರ ಉಪವಿಭಾಗ ಕಛೇರಿಯಲ್ಲಿ ಮಾನ್ಯ ಡಾ||ಹೆಚ್.ಎಸ್. ಗೋಪಾಲಕೃಷ್ಣ, ವ್ಯವಸ್ಥಾಪಕ ನಿರ್ದೇಶಕರು, ಚಾ.ವಿ.ಸ.ನಿ.ನಿ, ರವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಎಂ.ಟಿ. ಮಂಜುನಾಥ್ : ಮುಖ್ಯ ಇಂಜಿನಿಯರ್, ಮೈಸೂರು ವಲಯ
2. ಶ್ರೀ ಶೇಖ್ ಅಬ್ದುಲ್ ಮಹಿಮುಲ್ಲಾ : ಲೆಕ್ಕನಿಯಂತ್ರಾಣಾಧಿಕಾರಿಗಳು, ಮೈಸೂರು ವಲಯ
3. ಶ್ರೀ ಜಿ.ಎಲ್ ಚಂದ್ರಶೇಖರ್ : ಪ್ರಧಾನ ವ್ಯವಸ್ಥಾಪಕರು(ಮಾ.ಸಂ.ಅ), ನಿಗಮ ಕಾರ್ಯಾಲಯ
4. ಶ್ರೀ ಮಹದೇವಸ್ವಾಮಿ ಪ್ರಸನ್ನ : ಅಧೀಕ್ಷಕ ಇಂಜಿನಿಯರ್, ಚಾ.ನಗರ-ಕೊಡಗು ವೃತ್ತ
5. ಶ್ರೀಮತಿ ಲಿಂಗರಾಜಮ್ಮ : ಉಪಲೆಕ್ಕನಿಯಂತ್ರಣಾಧಿಕಾರಿಗಳು, ಚಾ.ನಗರ-ಕೊಡಗು ವೃತ್ತ
6. ಶ್ರೀ ಪೂರ್ಣಚಂದ್ರ ತೇಜಸ್ವಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾಮರಾಜನಗರ
7. ಶ್ರೀ ಆರ್. ಭಾಸ್ಕರ್ : ಲೆಕ್ಕಾಧಿಕಾರಿ, ಚಾಮರಾಜನಗರ
8. ಶ್ರೀ ಬೆಳ್ಳಯ್ಯ ; ಲೆಕ್ಕಾಧಿಕಾರಿ(ಆಂ.ಪ), ಚಾಮರಾಜನಗರ
9. ಶ್ರೀ ರಾಜು ಎಂ : ಸ.ಕಾ.ನಿ.ಇಂ(ವಿ), ಚಾಮರಾಜನಗರ ಉಪವಿಭಾಗ
10. ಶ್ರೀ ದೇವರಾಜಯ್ಯ : ಸ.ಕಾ.ನಿ.ಇಂ(ವಿ), ಹರದನಹಳ್ಳಿ ಉಪವಿಭಾಗ
11. ಶ್ರೀ ಶಶಿಧರ್ : ಸ.ಕಾ.ನಿ.ಇಂ(ವಿ), ಸಂತೇಮರಹಳ್ಳಿ ಉಪವಿಭಾಗ
12. ಶ್ರೀ ಸಿದ್ದಲಿಂಗಪ್ಪ : ಸ.ಕಾ.ನಿ.ಇಂ(ವಿ), ಗುಂಡ್ಲುಪೇಟೆ ಉಪವಿಭಾಗ
13. ಶ್ರೀ ರಾಮಚಂದ್ರ : ಸ.ಕಾ.ನಿ.ಇಂ(ವಿ), ಬೇಗೂರು ಉಪವಿಭಾಗ
14. ಶ್ರೀ ಮಂಗಳಾಂಬ ಎ. ಆರ್ : ಸಹಾಯಕ ಲೆಕ್ಕಾಧಿಕಾರಿ, ಚಾಮರಾಜನಗರ ಉಪವಿಭಾಗ
15. ಶ್ರೀ ಮಹೇಶ್ ಎನ್ : ಸಹಾಯಕ ಲೆಕ್ಕಾಧಿಕಾರಿ, ಚಾಮರಾಜನಗರ ವಿಭಾಗಕಚೇರಿ
16. ಶ್ರೀ ಪ್ರವೀಣ್ : ಸಹಾಯಕ ಇಂಜಿನಿಯರ್(ವಿ), ಚಾಮರಾಜನಗರ, ನಗರ ಶಾಖೆ
17. ಶ್ರೀ ಮಂಜುನಾಥ್ : ಕಿ.ಇಂ(ವಿ), ರಾಮಸಮುದ್ರ ಶಾಖೆ
18. ಶ್ರೀ ಚಂದ್ರನಾಯ್ಕ್ : (ಪ್ರಭಾರ), ಕಿ.ಇಂ(ವಿ), ಬದನಗುಪ್ಪೆ ಶಾಖೆ
19. ಶ್ರೀ ಶಿವಕುಮಾರ್ : (ಪ್ರಭಾರ), ಕಿ.ಇಂ(ವಿ), ಮಾದಾಪುರ ಶಾಖೆ

AEE/JE 5/7/19

EE(O)

ಶ್ರೀ ಪ್ರವೀಣ್, ಸಹಾಯಕ ಇಂಜಿನಿಯರ್(ವಿ) ರವರು ಅಧಿಕಾರಿ/ಸಾರ್ವಜನಿಕರು/ಪತ್ರಿಕಾ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿದರು.

ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ನೀಡಿರುವ ದೂರು ಹಾಗೂ ದೂರನ್ನು ನಿವಾರಿಸುವ ಸಂಬಂಧ ನೀಡಿರುವ ಉತ್ತರಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

| ಕ್ರ.ಸ. | ಸಲಹೆ/ದೂರುಗಳನ್ನು ನೀಡಿದವರು. | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ. ಮಹೇಶ್ ಪ್ರಭು, ರೈತ ಮುಖಂಡರು ಚಾಮರಾಜನಗರ | * 2006 ರಲ್ಲಿ ಒಟ್ಟು 105 ಹಳ್ಳಿಗಳಲ್ಲಿ ಕರ ನಿರಾಕರಣೆ ಚಳುವಳಿ ನಡೆದಿದ್ದು, ಅದರಲ್ಲಿ ಕೇವಲ 37 ಹಳ್ಳಿಗಳ ವಿದ್ಯುತ್ ಬಿಲ್‌ಗಳನ್ನು ಮಾತ್ರ ಮನ್ನಾ ಮಾಡಲಾಗಿದೆ. ಉಳಿದ 68 ಹಳ್ಳಿಗಳ ವಿದ್ಯುತ್ ಬಿಲ್ಲ್‌ಗಳನ್ನು ಮನ್ನಾ ಮಾಡಿರುವುದಿಲ್ಲ. ಇದಕ್ಕೆ ಸರ್ಕಾರದ ಆದೇಶವೇನಾದರೂ ಇದೆಯೇ? ಎಂದು ಪ್ರಶ್ನಿಸಿ, ಉಳಿದ ಹಳ್ಳಿಗಳಿಗೂ ಬಾಕಿ ಇರುವ ಹಣವನ್ನು ಮನ್ನಾ ಮಾಡಬೇಕೆಂದು ಒತ್ತಾಯಿಸಿರುತ್ತಾರೆ. | * ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಉತ್ತರಿಸುತ್ತಾ ಸರ್ಕಾರ ತೆಗೆದುಕೊಂಡಿರುವ ನಿರ್ಧಾರದ ಮೇಲೆ ವಿದ್ಯುತ್ ಬಾಕಿಯನ್ನು ತಡೆಹಿಡಿಯಲಾಗಿದೆ. ಯಾವುದೇ ವಿದ್ಯುತ್ ಶುಲ್ಕವನ್ನು ಮನ್ನಾ ಮಾಡಿರುವುದಿಲ್ಲ ಹಾಗೂ ಈ ವಿಚಾರವಾಗಿ ಮತ್ತೊಮ್ಮೆ ಸರ್ಕಾರದ ಆದೇಶವನ್ನು ಪರಿಶೀಲಿಸುವುದಾಗಿ ಹೇಳಿದರು. ಬಾಕಿ ಹಣವನ್ನು ಪಾವತಿಸಲು ರೈತರಿಗೆ ಕಷ್ಟವಾದರೆ ಕಂತಿನಲ್ಲಿ ಪಾವತಿಸಲು ಅವಕಾಶ ನೀಡುತ್ತೇವೆ ಎಂದು ಹೇಳಿದರು. |
| 2 | ಶ್ರೀ. ದೊಡ್ಡಮಾದಪ್ಪ, ಭುಜಗನಪುರ ಫೋನ್ ನಂ. 9513775951 | *Transformer ಸುಟ್ಟುಹೋಗಿದ್ದು ಅದನ್ನು ಬದಲಾಯಿಸಲು ಕೋರಿರುತ್ತಾರೆ. | *ವಿಫಲಗೊಂಡ Transformerನ್ನು ಕೂಡಲೇ ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 3 | ಶ್ರೀ. ಲಿಂಗಪ್ಪ, ಮರಿಯಾಲ ಫೋನ್ ನಂ. 9742859172 | * ಕುಡಿಯುವ ನೀರು ಮತ್ತು ಪಂಪ್‌ಸೆಟ್‌ಗಳನ್ನೊಳಗೊಂಡ ಸ್ಥಾವರಗಳ Transformer ಸುಟ್ಟುಹೋಗಿದ್ದು, ಅದನ್ನು ಬದಲಾಯಿಸಲು ಕೋರಿರುತ್ತಾರೆ.<br>* BJ/KJ ಸ್ಥಾವರಗಳಿಗೆ ಹೆಚ್ಚು ಬಿಲ್ಲನ್ನು ನೀಡಿ ಸಂಪರ್ಕ ಕಡಿತಗೊಳಿಸಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಕೋರಿರುತ್ತಾರೆ. | * ವಿಫಲಗೊಂಡ Transformer ನ್ನು ಕೂಡಲೇ ಬದಲಾಯಿಸುವಂತೆ ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸೂಚಿಸಿದರು.<br>* BJ/KJ ಸ್ಥಾವರಗಳಿಗೆ ಬಿಲ್ಲನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 4 | ಶ್ರೀಮತಿ. ಲೀಲಮ್ಮ, ಕಲ್ಲಹಳ್ಳಿ | * ವಿಫಲಗೊಂಡ Transformer ಬದಲಾಯಿಸಲು ವಿದ್ಯುತ್ ಗುತ್ತಿಗೆದಾರರಿಗೆ ರೂ.25,000 ಗಳನ್ನು ನೀಡಿ 3 ತಿಂಗಳಾಗಿದ್ದರೂ ಸಹಾ ಇಲ್ಲಿಯ ತನಕ ಬದಲಾಯಿಸಿರುವುದಿಲ್ಲ. | * ದೂರುದಾರರು ಹೆಸರಿಸಿರುವ ಗುತ್ತಿಗೆದಾರರನ್ನು ಕರೆದು ವಿಚಾರಣೆ ನಡೆಸಿ ಕ್ರಮವಹಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಸೂಚಿಸಿದರು. |
| 5 | ಶ್ರೀ. ಪ್ರಕಾಶ್, ರೈತ ಮುಖಂಡರು, ಹೊನ್ನೂರು, | * ಮಹದೇಶ್ವರ ಬೆಟ್ಟದ ತಪ್ಪಲಿನ ಸುತ್ತಮುತ್ತಲಿನಲ್ಲಿರುವ ಹಾಡಿಗಳಿಗೆ ಇಲ್ಲಿಯ ತನಕ ವಿದ್ಯುತ್ ಸಂಪರ್ಕವನ್ನು ಕೊಟ್ಟಿರುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಕೋರಿರುತ್ತಾರೆ. | * ಪ್ರಸ್ತಾವಿತ ಪ್ರದೇಶಗಳು ವನ್ಯಜೀವಿ ಸಂರಕ್ಷಿತ ವಲಯದಡಿ ಬರುತ್ತಿರುವುದರಿಂದ DDG ಕಾರ್ಯಕ್ರಮದಡಿ ಸೋಲಾರ್ ವಿದ್ಯುತ್ ದೀಪ ವ್ಯವಸ್ಥೆಯನ್ನು ನೀಡಲಾಗಿರುತ್ತದೆ. ಇದನ್ನು ಹೊರತುಪಡಿಸಿ ವಿದ್ಯುತ್ ಸಂಪರ್ಕವಿಲ್ಲದಿರುವ ಇತರ ಹಾಡಿಗಳಿದ್ದಲ್ಲಿ ಅವುಗಳಿಗೂ ಸಹಾ ಸೋಲಾರ್ ವಿದ್ಯುತ್ ದೀಪ ವ್ಯವಸ್ಥೆಯನ್ನು ಅಳವಡಿಸಲು ಕ್ರಮವಹಿಸುವುದಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ತಿಳಿಸಿದರು. |
| 6 | ಶ್ರೀ. ಸಿದ್ದರಾಜು, ಕಾಗಲವಾಡಿ | * ಅಮ್ಮನಪುರ ಗ್ರಾಮಕ್ಕೆ DDUGJY ಸೌಲಭ್ಯವನ್ನು ನೀಡಿಲ್ಲ ಹಾಗೂ ಶಿಥಿಲಗೊಂಡ ವಿದ್ಯುತ್ ಕಂಬಗಳನ್ನು ಬದಲಾವಣೆ ಮಾಡಿರುವುದಿಲ್ಲ. | * DDUGJY ಕಾರ್ಯಕ್ರಮವು ಪ್ರಗತಿಯಲ್ಲಿದ್ದು, ಅಮ್ಮನಪುರ ಗ್ರಾಮಕ್ಕೂ ವಿಸ್ತರಿಸುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು. ಮುಂದುವರೆದು, ಸದರಿ ಗ್ರಾಮದಲ್ಲಿ ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬಗಳನ್ನು ಆದ್ಯತೆಯ ಮೇಲೆ ಬದಲಾಯಿಸುವಂತೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಶಾಖಾಧಿಕಾರಿಯವರಿಗೆ |

| ಕ್ರ.ಸ. | ಸಲಹೆ/ದೂರುಗಳನ್ನು ನೀಡಿದವರು. | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 7 | ಶ್ರೀ. ಜಯಕುಮಾರ್, ಚಾಮರಾಜನಗರ | * ಚಾಮರಾಜನಗರ ಜಿಲ್ಲೆಯನ್ನು ಮೈಸೂರು–ಚಾಮರಾಜನಗರ ವೃತ್ತಕ್ಕೆ ಸೇರಿಸುವ ಬದಲು ಪ್ರತ್ಯೇಕ ಚಾಮರಾಜನಗರ ವೃತ್ತವನ್ನು ಪ್ರಾರಂಭಿಸುವಂತೆ ಕೋರಿದರು. | * ಮಂಡಳಿ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದ್ದು, ಮನವಿಗೆ ಸಂಬಂಧಿಸಿದಂತೆ ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ತಿಳಿಸಿದರು. |
| 8 | ಬ್ಯಾಡಮೂಡ್ಲು ಗ್ರಾಮಸ್ಥರು | * Transformer ವಿಫಲವಾಗಿ 18 ದಿನಗಳು ಕಳೆದರೂ Transformerನ್ನು ಬದಲಾಯಿಸಿರುವುದಿಲ್ಲ ಹಾಗೂ ಒಂದೇ ಕುಡಿಯುವ ನೀರು ಮತ್ತು ಪಂಪ್‌ಸೆಟ್ ಸ್ಥಾವರಗಳ ಸಂಪರ್ಕವನ್ನು ಒಂದೇ Transformerನಿಂದ ನೀಡಿರುತ್ತಾರೆ. | * ಕುಡಿಯುವ ನೀರು ಮತ್ತು ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಪರಿವರ್ತಕವು ವಿಫಲವಾದಲ್ಲಿ ಆದ್ಯತೆಯ ಮೇರೆಗೆ ಬದಲಾಯಿಸಲಾಗುತ್ತಿದೆ. ಪರಿಶೀಲಿಸಿ ಕ್ರಮ ವಹಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಸೂಚಿಸಿದರು. |
| 9 | ಶ್ರೀ. ಶಿವಕುಮಾರ್, ಮರಿಯಾಲ | * ಮರಿಯಾಲ ಗ್ರಾಮದಲ್ಲಿ ಎರಡು Transformerಗಳು ವಿಫಲಗೊಂಡಿದ್ದು, ಈ ಸಂಬಂಧ ಶಾಖಾಧಿಕಾರಿಗಳಿಗೆ ದೂರು ನೀಡಿದ್ದರೂ ಸಹ ಇಲ್ಲಿಯತನಕ ಬದಲಾಯಿಸಿರುವುದಿಲ್ಲವೆಂದು ತಿಳಿಸಿದರು. | * ಪರಿಶೀಲನೆ ನಡೆಸಿ ಎರಡು ದಿನಗಳ ಒಳಗೆ ಕ್ರಮವಹಿಸುವಂತೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 10 | ಶ್ರೀ. ಸುಬ್ರಮಣ್ಯ, ಹರದನಹಳ್ಳಿ | * ಹರದನಹಳ್ಳಿ ಅರಣ್ಯ ಪ್ರದೇಶ ವ್ಯಾಪ್ತಿಯ Transformer ಸುಟ್ಟುಹೋಗಿದ್ದು, ಅದನ್ನು ಶೀಘ್ರವಾಗಿ ಬದಲಾಯಿಸಲು ಕೋರಿರುತ್ತಾರೆ. | * ಎರಡು ದಿನಗಳ ಒಳಗೆ ಬದಲಾಯಿಸಲು ಕ್ರಮವಹಿಸಲಾಗುವುದೆಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು. |
| 11 | ಶ್ರೀ. ಜಯಣ್ಣ, ಆಲೂರು | * ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಪಡೆಯಲಾಗುತ್ತಿರುವ ರೂ. 10,000 ದಂಡ ಶುಲ್ಕವನ್ನು ಮನ್ನಾ ಮಾಡುವ ಬಗ್ಗೆ.<br>* ಜಮೀನಿನ ಮೇಲೆ ಜೋತುಬಿದ್ದಿರುವ ವಿದ್ಯುತ್ ಲೈನ್‌ಗಳಿಂದ ಬೆಳೆಗಳು ನಾಶವಾಗುತ್ತಿದ್ದು ಈ ಸಂಬಂಧ ಕ್ರಮವಹಿಸುವಂತೆ ಕೋರಿರುತ್ತಾರೆ. | * ಅನಧಿಕೃತ ಐಪಿ ಸ್ಥಾವರಗಳನ್ನು ಸಕ್ರಮಗೊಳಿಸುವ ಪ್ರಕ್ರಿಯೆ ಚಾಲನೆಯಲ್ಲಿ ಇಲ್ಲದಿರುವುದರಿಂದ, ಸಾಮಾನ್ಯ ಐಪಿ ಸೆಟ್ ಯೋಜನೆಯಲ್ಲಿ ಅರ್ಜಿ ನೊಂದಾಯಿಸುವ ರೈತರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ರೂ. 10,000 ಹಣವನ್ನು Devlopment Charges ಆಗಿ ಪಡೆಯಲಾಗುತ್ತಿದೆ. ದಂಡ ರೂಪದಲ್ಲಿ ಯಾವುದೇ ಹಣ ವಸೂಲಿ ಮಾಡುತ್ತಿಲ್ಲವೆಂದು ಹಾಗೂ ಜಮೀನಿನ ಮೇಲೆ ಹಾದು ಹೋಗಿರುವ ಮಾರ್ಗಗಳು ಜೋತುಬಿದ್ದಿದ್ದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸಲು ಕ್ಷೇತ್ರಾಧಿಕಾರಿಗಳಿಗೆ ಸೂಚಿಸುವುದಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಸಭೆಗೆ ತಿಳಿಸಿದರು. |
| 12 | ಶ್ರೀ. ಜಗದೀಶ್, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು | * ಕರಾ ನಿರಾಕರಣೆ ಚಳುವಳಿಯಿಂದಾಗಿ ನಾವು ಹಣ ಕಟ್ಟದೇ ಹೆಚ್ಚಾಗಿ ಕಂದಾಯ ಬಾಕಿ ಉಳಿದಿರುತ್ತದೆ. ಕಳೆದ ತಿಂಗಳು 1,150 ರೂ. ಪಾವತಿ ಮಾಡಿದ್ದರೂ ಕೂಡ ಈ ದಿನ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುತ್ತಾರೆ. ಆದ್ದರಿಂದ ನನಗೆ ಸಂಪರ್ಕ ಹಾಕಿಸಿಕೊಡಬೇಕೆಂದು ಕೇಳಿರುತ್ತಾರೆ. | * ಕಾರ್ಯನಿರ್ವಾಹಕ ಇಂಜಿನಿಯರ್ ರವರು ಉತ್ತರಿಸುತ್ತಾ ನಿಮಗೆ ಕಂತಿನಲ್ಲಿ ಹಣ ಕಟ್ಟಲು ಅವಕಾಶ ಒದಗಿಸಿಕೊಡುತ್ತೇವೆ. ಅದನ್ನು ಬಳಸಿಕೊಂಡು ಹಣ ಪಾವತಿಸಿ ಮರು ಸಂಪರ್ಕ ಪಡೆಯಿರಿ ಎಂದು ತಿಳಿಸಿದರು. |
| 13 | ಶ್ರೀ. ಮಹದೇವಪ್ಪ, ಮಾಡ್ರಳ್ಳಿ ಮತ್ತು ಶ್ರೀ. ಶಾಂತಮಲ್ಲಪ್ಪ, ನಿಟ್ರೆ, ಗುಂಡ್ಲುಪೇಟೆ ತಾಲ್ಲೂಕು | *ಕರ ನಿರಾಕರಣೆ ಚಳುವಳಿಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ರೈತರೂ ಸಹ ಸಕ್ರಿಯವಾಗಿ ಭಾಗವಹಿಸಿರುತ್ತಾರೆ. ಯಳಂದೂರು ತಾಲ್ಲೂಕಿನ ಹಳ್ಳಿಗಳಲ್ಲಿ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಿರುವಂತೆ ನಮಗೂ ಸಹ ಮನ್ನಾ ಮಾಡುವಂತೆ ಕೋರಿಕೊಂಡರು. | *ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಉತ್ತರಿಸುತ್ತಾ ಸರ್ಕಾರ ತೆಗೆದುಕೊಂಡಿರುವ ನಿರ್ಧಾರದ ಮೇಲೆ ವಿದ್ಯುತ್ ಬಾಕಿಯನ್ನು ತಡೆಹಿಡಿಯಲಾಗಿದೆ. ಯಾವುದೇ ವಿದ್ಯುತ್ ಶುಲ್ಕವನ್ನು ಮನ್ನಾ ಮಾಡಿರುವುದಿಲ್ಲ ಹಾಗೂ ಈ ವಿಚಾರವಾಗಿ ಮತ್ತೊಮ್ಮೆ ಸರ್ಕಾರದ ಆದೇಶವನ್ನು ಪರಿಶೀಲಿಸುವುದಾಗಿ ಹೇಳಿದರು. ಬಾಕಿ ಹಣವನ್ನು ಪಾವತಿಸಲು ರೈತರಿಗೆ ಕಷ್ಟವಾದರೆ ಕಂತಿನಲ್ಲಿ ಪಾವತಿಸಲು ಅವಕಾಶ ನೀಡುತ್ತೇವೆ ಎಂದು ಹೇಳಿದರು. |

| ಕ್ರ.ಸ. | ಸಲಹೆ/ದೂರುಗಳನ್ನು ನೀಡಿದವರು. | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 14 | ಶ್ರೀ. ದಯಾನಿಧಿ, ತಾಲ್ಲೂಕು ಪಂಚಾಯತ್ ಸದಸ್ಯರು, ಪುಟ್ಟನಪುರ | * ಚಾಮರಾಜನಗರ ತಾಲ್ಲೂಕಿನ ರೈತರು ಸಹ ಕರ ನಿರಾಕರಣೆ ಚಳುವಳಿಯಲ್ಲಿ ಭಾಗವಹಿಸಿರುತ್ತಾರೆ. ಇತರ ತಾಲ್ಲೂಕಿನಲ್ಲಿ ಮಾಡಿರುವಂತೆ ನಮ್ಮ ಮನೆಗಳ ವಿದ್ಯುತ್ ಬಾಕಿಯನ್ನು ಮನ್ನಾ ಮಾಡುವಂತೆ ಹಾಗೂ ಈಗಿರುವ ಬಾಕಿಯನ್ನು ಅಮಾನತ್ತಿನಲ್ಲಿಟ್ಟು ಹೊಸ ಮೀಟರ್ ಅಳವಡಿಸಿ ಅಲ್ಲಿಂದ ಮುಂದಿನ ಬಿಲ್ಲನ್ನು ಕಟ್ಟಲು ಅವಕಾಶ ನೀಡಬೇಕೆಂದು ಕೋರಿಕೊಂಡಿರುತ್ತಾರೆ. | * ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಉತ್ತರಿಸುತ್ತಾ ಸರ್ಕಾರ ತೆಗೆದುಕೊಂಡಿರುವ ನಿರ್ಧಾರದ ಮೇಲೆ ವಿದ್ಯುತ್ ಬಾಕಿಯನ್ನು ತಡೆಹಿಡಿಯಲಾಗಿದೆ. ಯಾವುದೇ ವಿದ್ಯುತ್ ಶುಲ್ಕವನ್ನು ಮನ್ನಾ ಮಾಡಿರುವುದಿಲ್ಲ ಹಾಗೂ ಈ ವಿಚಾರವಾಗಿ ಮತ್ತೊಮ್ಮೆ ಸರ್ಕಾರದ ಆದೇಶವನ್ನು ಪರಿಶೀಲಿಸುವುದಾಗಿ ಹೇಳಿದರು. ಬಾಕಿ ಹಣವನ್ನು ಪಾವತಿಸಲು ರೈತರಿಗೆ ಕಷ್ಟವಾದರೆ ಕಂತಿನಲ್ಲಿ ಪಾವತಿಸಲು ಅವಕಾಶ ನೀಡುತ್ತೇವೆ ಎಂದು ಹೇಳಿದರು. |
| 15 | ಶ್ರೀ. ನಾಗೇಂದ್ರ, ಮರಿಯಾಲ ಗ್ರಾಮ | * ನಮ್ಮ ಜಮೀನಿನಲ್ಲಿದ್ದ ಪರಿವರ್ತಕ ಕಳುವಾಗಿದ್ದು ಎಫ್.ಐ.ಆರ್ ಆಗಿರುತ್ತದೆ. ಆದಷ್ಟು ಬೇಗ ನಮಗೆ ಪರಿವರ್ತಕ ಅಳವಡಿಸಿಕೊಡಬೇಕೆಂದು ಕೋರಿರುತ್ತಾರೆ | * ಪರಿವರ್ತಕಗಳ ಚಲನೆಯನ್ನು Monitor ಮಾಡಲು ನಿಗಮದಲ್ಲಿ DTLMS ತಂತ್ರಾಂಶವನ್ನು ಅಳವಡಿಸಿದ್ದು, ಇದರ ಮುಖಾಂತರ ಪರಿವರ್ತಕವನ್ನು ಅಳವಡಿಸಿದ್ದಲಿಂದ ಇಲ್ಲಿಯ ತನಕದ ಸಂಪೂರ್ಣ ಮಾಹಿತಿಯು ಲಭ್ಯವಾಗುತ್ತದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ತಿಳಿಸಿದರು. ಮುಂದುವರೆದು, ಕಳವಾಗಿರುವ ಪರಿವರ್ತಕದ ಬಗ್ಗೆ ನಿಯಮಾನುಸಾರ ಕ್ರಮವಹಿಸಲಾಗುವುದೆಂದು ತಿಳಿಸಿದರು. |

ಶ್ರೀ.ರಾಜು.ಎಂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾಮರಾಜನಗರ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರಿಗೂ/ಸಾರ್ವಜನಿಕರಿಗೂ/ಜನಪ್ರತಿನಿಧಿಗಳಿಗೂ/ಪತ್ರಿಕಾ ಪ್ರತಿನಿಧಿಗಳಿಗೂ ಹಾಗೂ ನಿಗಮದ ಅಧಿಕಾರಿ ವೃಂದದವರಿಗೂ ವಂದನೆಗಳನ್ನು ಸಲ್ಲಿಸಿದರು. ಇದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾ ಮತ್ತು ಪಾ ವಿಭಾಗ,
ಚಾವಿಸನಿನಿ, ಚಾಮರಾಜನಗರ.

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು ರವರ ದಯಾಪರ ಅವಗಾಹನೆಗಾಗಿ.
2. ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು ರವರ ಅವಗಾಹನೆಗಾಗಿ
3. ಅಧೀಕ್ಷಕ ಇಂಜಿನಿಯರ್(ವಿ),ಚಾಮರಾಜನಗರ-ಕೊಡಗು ವೃತ್ತ, ಚಾವಿಸನಿನಿ, ಮೈಸೂರು ರವರ ಅವಗಾಹನೆಗಾಗಿ.
4. ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು ,ರವರ ಅವಗಾಹನೆಗಾಗಿ.
5. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ತಾಂತ್ರಿಕ ಸಹಾಯಕರಿಗೆ ಕಳುಹಿಸುತ್ತಾ ಸಭಾ ನಡಾವಳಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಗಮನಕ್ಕೆ ತರುವಂತೆ ಕೋರಿದೆ.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾವಿಸನಿನಿ, ಚಾಮರಾಜನಗರ ಇವರ ಮಾಹಿತಿಗಾಗಿ.
7. ಮಾನ್ಯ ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರಿಗೆ ಕಳುಹಿಸುತ್ತಾ ಸಭಾ ನಡಾವಳಿಯನ್ನು ಮಾನ್ಯ ನಿರ್ದೇಶಕರು(ತಾಂತ್ರಿಕ) ರವರ ಗಮನಕ್ಕೆ ತರುವಂತೆ ಕೋರಿದೆ.
8. ಮುಖ್ಯ ಕಡತ.